ದಿ: 15-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಪಾಟೀ ಸವಾಲು ಃ ಶ್ರೀ ಎಸ್.ಎನ್., ವಕೀಲರಿಂದ ಪ್ರತಿವಾದಿಯ ಪರವಾಗಿಃ**

ದಿಃ 28-08-2021 ರಂದು Order ಗಳನ್ನು Marketing Executive ರವರು ನನಗೆ ಹೇಳಿರುವುದಿಲ್ಲ ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. Marketing Executive ರವರು ನನಗೆ order ಗಳ ಬಗ್ಗೆ ತಿಳಿಸಿಲ್ಲ ಅಂತ ನಾನು ಕಂಪನಿಯವರಿಗೆ whatsapp ನಲ್ಲಿ ಸಂದೇಶ ಕಳುಹಿಸಿಕೊಟ್ಟಿದ್ದೆ. ಇದರ ಬಾಬ್ತು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ದಾಖಲೆಯನ್ನು ಹಾಜರುಪಡಿಸಲು ನನಗೆ ಏನೂ ತೊಂದರೆ ಇರಲಿಲ್ಲ. ಆ ರೀತಿ Marketing Executive ರವರು ನಮಗೆ order ತಂದು ಕೊಟ್ಟಿದ್ದರೂ ಸಹ ನಾವು material supply ಮಾಡುತ್ತಿರಲಿಲ್ಲ ಅಂದರೆ ಸುಳ್ಳು. ಸುಮಾರು 05 ತಿಂಗಳಷ್ಟು materials ನಮ್ಮಲ್ಲಿ ಹಾಗೆ ಉಳಿದುಕೊಂಡಿತ್ತು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇದರ ಬಗ್ಗೆ ನಾನು ಪತ್ರ ಏನು ಬರೆದಿಲ್ಲ ಆದರೆ whatsapp ಮತ್ತು ದೂರವಾಣಿ ಮೂಲಕ ತಿಳಿಸಿದ್ದೆ. ಈ ವಿಷಯದ ಬಗ್ಗೆ ಯಾವ ದಿನಾಂಕ ಅಥವಾ ಇಸ್ವಿ whatsapp ಮತ್ತು ದೂರವಾಣಿ ಮೂಲಕ ತಿಳಿಸಿದ್ದೆ ಅಂತ ಹೇಳಲು ಬರುವುದಿಲ್ಲ. Materials ನ್ನು ಉಪಯೋಗ ಆಗದೇ ಹಾಗೆ ಇಟ್ಟಿದ್ದಲ್ಲಿ ನಷ್ಟ ಆಗಬಹುದು ಎಂದು ನಾನು ಕಂಪನಿಯವರಿಗೆ ತಿಳಿಸಿದ್ದೆ. Materials ನಷ್ಟ ಆಗಬಹುದು ಅಂತ ಸುಮಾರು ಸಲ ಪ್ರತಿವಾದಿಗೆ ತಿಳಿಸಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಇದರ ಬಾಬ್ತು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿಗೆ ಉಳಿದಿರುವಂತಹ Materials ನ್ನು ವಾಪಸ್ಸು ತೆಗೆದುಕೊಂಡು ಹೋಗಿ ಅಂತ ದಾಖಲೆ ಇಲ್ಲ whatsapp chat ಇರಬಹುದು. Materials ನ್ನು ನಾವೇ ಪ್ಯಾಕ್ ಮಾಡಿ ಪುಣೆಗೆ ಕಳುಹಿಸುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಕಡೆ ಉಳಿದಿರುವ materials ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಇವತ್ತಿನವರೆಗೂ stock ನನ್ನ ಹತ್ತಿರ ಇದೆ.

ನನ್ನ ನಿರ್ಲಕ್ಷ್ಯತನದಿಂದ ಆ Materials ನನ್ನ ಕಡೆ ಉಳಿದುಕೊಂಡಿದೆ ಅಂದರೆ ಸುಳ್ಳು. ನಮ್ಮ ವ್ಯವಹಾರದಲ್ಲಿ ಯಾವುದೇ ವಿವಾದ ಬಂದಲ್ಲಿ ಪ್ರಕರಣವನ್ನು ಪುಣೆಯಲ್ಲಿ ದಾಖಲು ಮಾಡಬೇಕು ಅಂತ ಇದೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಪ್ರತಿವಾದಿ ದಾವಣಗೆರೆಗೆ ಬಂದು ವ್ಯವಹಾರವನ್ನು ಇಲ್ಲೇ ಮಾಡಿರುತ್ತಾರೆ. ಆದ್ದರಿಂದ ಪರಿಹಾರ ಪಡೆಯಲು ನಾನು ಅರ್ಹರಾಗಿಲ್ಲ ಅಂದರೆ ಸರಿಯಲ್ಲ. ಕಂಪನಿಯವರು ಯಾವುದೇ ಬಾಕಿ ಉಳಿಸಿಕೊಂಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪಾವತಿಸಿದ ಹಣಕ್ಕೆ ಪ್ರತಿವಾದಿಯವರು materials ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿಯ ಮೇಲೆ ಸುಳ್ಳು ಹೊಣೆಗಾರಿಗೆ ಮಾಡಲು ಈ ರೀತಿ ದಾವಾ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.